**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

C.C.No. 17/2022

C.W.1

P.W.1

ಸಾಕ್ಷಿದಾರರ ಹೆಸರು : ಜಗದೀಶ ದೇವಾಡಿಗ

ತಂದೆಯ ಹೆಸರು : ರಾಮಕೃಷ್ಣ ದೇವಾಡಿಗ

ವಯಸ್ಸು : 34 ವರ್ಷ

ಉದ್ಯೋಗ : ಉಪ ವಲಯ ಅರಣ್ಯಾಧಿಕಾರಿ, ಬಾಳೆಗುಳಿ,

ವಾಸ : ಅಂಕೋಲಾ.

ದಿನಾಂಕಃ 13-01-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ ಎ ಪಿ ಯವರಿಂದಃ**

ನಾನು ದಿನಾಂಕ 07-12-2019 ರಿಂದ ಈತನಕ ಬಾಳೆಗುಳಿ ಉಪ ವಲಯ ಅರಣ್ಯಾಧಿಕಾರಿಯಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 14-08-2020 ರಂದು ಅಂಕೋಲಾ ತಾಲೂಕಿನ ನವಗದ್ದೆ ಗ್ರಾಮದ ಅರಣ್ಯ ಸರ್ವೆ ನಂಬರ್ 26 ರಲ್ಲಿ ಸದರಿ ಗ್ರಾಮದ ನಿವಾಸಿಯಾದ 1 ನೇ ಆರೋಪಿಯು ಒಂದು ಕಡವೆಯನ್ನು ಗುಂಡಿಟ್ಟು ಕೊಂದು, ಮಾಂಸವನ್ನು ತಯಾರಿಸಿ ಸಾಗಾಟ ಮಾಡುತ್ತಿರುವ ಬಗ್ಗೆ ಕಚೇರಿಗೆ ಮಾಹಿತಿ ಬಂದಿತ್ತು. ಅದರಂತೆ ನಾನು ಹಾಗೂ ಪಂಚರಾದ ಪ್ರಭಾಕರ ನಾಯ್ಕ, ಮೋಹನ್ ಶಾಂಭಾ ನಾಯ್ಕ, ಮಂಜುನಾಥ ನಾಯಕ, ರಾಮಕೃಷ್ಣ ನಾಯ್ಕ ಹಾಗೂ ಸುರೇಶ ನಾಯ್ಕ ರೆಲ್ಲರೂ ಸೇರಿ ಇಲಾಖಾ ವಾಹನದಲ್ಲಿ ಅಂಕೋಲಾದಿಂದ ರಸ್ತೆ ಮಾರ್ಗವಾಗಿ ಬಾಳೆಗುಳಿ, ನವಗದ್ದೆ, ಕಂಚಿನ ಬಾಗಿಲು ಕಡೆ

ಹೊರಟೆವು. ಹೀಗೆ ಹೋಗುತ್ತಿದ್ದಾಗ ನವಗದ್ದೆಯ ಕಂಚಿನ ಬಾಗಿಲಿನಿಂದ ಸ್ವಲ್ಪ ಹಿಂದೆ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ 1 ನೇ ಆರೋಪಿಯ ಮನೆಗೆ ಹೋಗುವ ಕಾಲುದಾರಿ ಹತ್ತಿರ ಒಂದು ಮೋಟಾರ ಬೈಕ್ ನಿಂತಿರುವುದು ಕಂಡು ಬಂತು. ಕೂಡಲೆ ಇಲಾಖಾ ವಾಹನವನ್ನು ಸದರಿ ಬೈಕ್‌ನಿಂದ ಸುಮಾರು 50 ಮೀಟರ್ ದೂರದಲ್ಲಿ ನಿಲ್ಲಿಸಿ ಗಮನಿಸುತ್ತಿದ್ದಾಗ, ಸುಮಾರು 5 ನಿಮಿಷದ ನಂತರ ಸದರಿ ಕಾಲುದಾರಿಯಿಂದ ಇಬ್ಬರು ವ್ಯಕ್ತಿಗಳು ನಡೆದುಕೊಂಡು ಸದರಿ ಬೈಕ್‌ನ ಹತ್ತಿರ ಬಂದರು. ಅವರ ಪೈಕಿ ಒಬ್ಬನು ಪ್ಲಾಸ್ಟಿಕ್ ಚೀಲದಲ್ಲಿ ಏನೊ ತಂದಿರವುದು ಕಂಡುಬಂತು.

3. ಕೂಡಲೆ ನಾವು ಇಲಾಖಾ ವಾಹನವನ್ನು ಚಲಾಯಿಸಿಕೊಂಡು ಸದರಿ ಬೈಕ್‌ನ ಹತ್ತಿರ ತಂದುನಿಲ್ಲಿಸುತ್ತಿದ್ದಾಗ, ಆ ಇಬ್ಬರು ಆ ಪ್ಲಾಸ್ಟಿಕ್ ಚೀಲವನ್ನು ಅಲ್ಲಿಯೆ ಬಿಟ್ಟು ಓಡಲಾರಂಭಿಸಿದರು. ಕೂಡಲೆ ನಾವು ಅವರನ್ನು ಬೆನ್ನಟ್ಟಿ ಹಿಡಿದೆವು. ಅವರನ್ನು ಸದರಿ ಚೀಲದ ಹತ್ತಿರ ಕರೆದುಕೊಂಡು ಬಂದು , ಸದರಿ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ ಹಸಿ ಮಾಂಸ ಇರುವುದು ಕಂಡುಬಂತು. ಅವರಲ್ಲಿ ಯಾವ ಪ್ರಾಣಿಯ ಮಾಂಸ ಎಂದು ಕೇಳಲಾಗಿ, ಕಡವೆಯ ಮಾಂಸ ಎಂದು ತಿಳಿಸಿದರು. ಅವರಿಬ್ಬರ ಹೆಸರನ್ನು ಕೇಳಲಾಗಿ ಬ್ರಿಜೇಶ್ ಗೋಪಾಲ ನಾಯಕ ಹಾಗೂ ಹನುಮ ಜಟ್ಟು ಗೌಡ ಎಂದು ತಿಳಿಸಿದರು. ನಂತರ ಕಡವೆ ಮಾಂಸದ ಬಗ್ಗೆ ಸದರಿ ಬ್ರಿಜೇಶ ಗೋಪಾಲ ನಾಯಕ ರನ್ನು ಕೇಳಲಾಗಿ, ನವಗದ್ದೆ ಅರಣ್ಯ ಪ್ರದೇಶದಿಂದ ಕೊಂದು ತಂದಿರುವುದಾಗಿ ತಿಳಿಸಿದರು. ಕಡವೆಯನ್ನು ಹೇಗೆ ಕೊಂದಿರುವುದು ಎಂದು ಕೇಳಲಾಗಿ, ಅದರ ಬಗ್ಗೆ ತಿಳಿದಿರುವುದಿಲ್ಲ ಹಾಗೂ ನನಗೆ ಹನುಮ ಜಟ್ಟು

ಗೌಡ ರವರು ರೂ.1,500/- ಕ್ಕೆ ಕಡವೆ ಮಾಂಸವನ್ನು ಕೊಡಿಸುವುದಾಗಿ ಬರಲು ತಿಳಿಸಿದಂತೆ ತಾನು ಸ್ಥಳಕ್ಕೆ ಬಂದು ರೂ.1,500/- ನ್ನು 1 ನೇ ಆರೋಪಿಗೆ ಪಾವತಿಸಿ ಮಾಂಸವನ್ನು ತಂದಿರುವುದಾಗಿ ಹಾಗೂ ಕಡವೆಯನ್ನು ಹೇಗೆ ಕೊಂದಿದ್ದು ಎಂದು ಹನುಮ ಜಟ್ಟು ಗೌಡರಿಗೆ ಗೊತ್ತು ಎಂದು ತಿಳಿಸಿದರು.

4. ನಂತರ ಸದರಿ ಹನುಮ ಜಟ್ಟು ಗೌಡರಿಗೆ ಕಡವೆಯನ್ನು ಕೊಂದ ಬಗ್ಗೆ ಕೇಳಲಾಗಿ, ತಾನು ಮತ್ತು 1 ನೇ ಆರೋಪಿ ಹಾಗೂ 5 ನೇ ಆರೋಪಿ ಸೇರಿ ದಿನಾಂಕ 13-08-2020 ರಂದು ರಾತ್ರಿ ಸುಮಾರು 9-00 ಘಂಟೆಗೆ 1 ನೇ ಆರೋಪಿಯ ಮನೆಯ ಸುತ್ತಲಿನ ಅರಣ್ಯ ಪ್ರದೇಶಕ್ಕೆ ಶಿಕಾರಿಗೆ ಹೋಗೋಣ ಎಂದು ನಿರ್ಧರಿಸಿ, ಟಾರ್ಚ್ ಮತ್ತು ಬಂದೂಕನ್ನು ತೆಗೆದುಕೊಂಡು ಅರಣ್ಯ ಪ್ರದೇಶಕ್ಕೆ ಹೋದೆವು ಎಂದು ತಿಳಿಸಿದರು. ಮುಂದುವರಿದು, 1 ನೇ ಆರೋಪಿ ಬಂದೂಕಿಗೆ ಸಿಡಿಮದ್ದನ್ನು ತುಂಬಿಕೊಂಡು ನಾವುಗಳು ಅರಣ್ಯ ಪ್ರದೇಶದಲ್ಲಿ ಕಾದು ಕುಳಿತುಕೊಂಡಿದ್ದಾಗ, ನಮ್ಮ ಹತ್ತಿರದಲ್ಲಿ ಒಂದು ಕಡವೆಯು ಹಾದು ಹೋಗುವುದನ್ನು ನೋಡಿ, 1 ನೇ ಆರೋಪಿ ಕಡವೆಗೆ ಗುಂಡಿಟ್ಟು ಹೊಡೆದರು ಎಂದು ತಿಳಿಸಿದರು. ಸದರಿ ಗುಂಡು ಕಡವೆಗೆ ತಾಗಿದರು ಕೂಡ ಅರಣ್ಯ ಪ್ರದೇಶದಲ್ಲಿ ಆ ಕಡವೆ ಓಡಿ ಹೋಯಿತು ಹಾಗೂ ಸದರಿ ಕಡವೆಗೆ ಮತ್ತೊಮ್ಮೆ ಗುಂಡಿಟ್ಟು ಹೊಡೆಯಲು ಮತ್ತೊಮ್ಮೆ ಬಂದೂಕಿಗೆ ಸಿಡಿಮದ್ದನ್ನು ತುಂಬಿಕೊಂಡು ಸದರಿ ಕಡವೆಯನ್ನು ಹುಡುಕಿದಾಗ, ಅದು ಅಲ್ಲೆ ಸ್ವಲ್ಪ ದೂರದಲ್ಲಿ ಹಳ್ಳದ ಪಕ್ಕದಲ್ಲಿ ಬಿದ್ದುಕೊಂಡಿರುವುದು ಕಂಡುಬಂತು ಮತ್ತು ಹತ್ತಿರ ಹೋಗಿ ನೋಡಿದಾಗ ಕಡವೆ ಸತ್ತು ಹೋಗಿರುವುದನ್ನು ಖಾತ್ರಿ ಪಡಿಸಿಕೊಂಡೆವು ಎಂದು ತಿಳಿಸಿದರು. ಈಗಾಗಲೆ ತುಂಬಾ

C.C.No. 17/2022

C.W.1

P.W.1

ರಾತ್ರಿಯಾಗಿರುವುದರಿಂದ ಕಡವೆಯನ್ನು ಬೆಳಿಗ್ಗೆ ಕತ್ತರಿಸುವ ವಿಚಾರ ಮಾಡಿ ಕಡವೆಯನ್ನು ಕೊಲ್ಲಲು ಬಳಸಿದ ಬಂದೂಕನ್ನು ಅಲ್ಲೆ ಪಕ್ಕದಲ್ಲಿ ಇದ್ದ ಬಿ .ಡಿ.ಗೌಡರ ತೆಂಗಿನ ತೋಟದ ಮರದ ಬುಡದಲ್ಲಿ ಮುಚ್ಚಿಟ್ಟು 1 ನೇ ಆರೋಪಿಯ ಮನೆಗೆ ಹೋಗಿ ಮಲಗಿಕೊಂಡಿರುವುದಾಗಿ ತಿಳಿಸಿದರು.

5. ಮುಂಜಾನೆ ಮೂವರು ಸೇರಿಕೊಂಡು ಕಡವೆ ಸತ್ತು ಬಿದ್ದಿದ್ದ ಸ್ಥಳಕ್ಕೆ ಹೋಗಿ ಬ್ಲೆಡ್ ಮತ್ತು ಕತ್ತಿಯ ಸಹಾಯದಿಂದ ಕಡವೆಯ ತಲೆ ಹಾಗೂ ಕಾಲುಗಳನ್ನು ಕತ್ತರಿಸಿ, ಚರ್ಮವನ್ನು ತೆಗೆದು ಮಾಂಸವನ್ನು ತಯಾರಿಸುವುದಾಗಿ ತಿಳಿಸಿದರು. ಕಡವೆಯ ಹೊಟ್ಟೆಯಲ್ಲಿ ಇದ್ದ ಮರಿಯನ್ನು ತೆಗೆದು ಉಳಿದ ಹೊಟ್ಟೆಯ ಭಾಗವನ್ನು ಹಳ್ಳಕ್ಕೆ ಎಸದಿದ್ದಾಗಿ ತಿಳಿಸಿದರು. ಕಡವೆಯ ಕಾಲುಗಳು, ಚರ್ಮ, ಕಡವೆಯ ಮರಿಯನ್ನು ಹಳ್ಳದ ನೀರಿನಲ್ಲಿ ಮುಳುಗಿಸಿಟ್ಟು ,ತಲೆಯನ್ನು ಮೇಲೆ ಬಿಟ್ಟಿರುತ್ತೇವೆ ಎಂದು ತಿಳಿಸಿರುತ್ತಾರೆ. ಮಾಂಸವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿರುತ್ತೇವೆ ಎಂದು ತಿಳಿಸಿದರು. ಕಡವೆಯನ್ನು ಸಾಯಿಸಲು ಬಳಸಿದ್ದ ಬಂದೂಕನ್ನು ನೀಡಿದ್ದ 4 ನೇ ಆರೋಪಿ ಮೊದಲೆ ಕಡವೆಯ ಮಾಂಸ ಬೇಕು ಎಂದು ತಿಳಿಸಿದ್ದರಿಂದ ಆತನಿಗೆ ದೂರವಾಣಿ ಮೂಲಕ ಸ್ಥಳಕ್ಕೆ ಬರಲು ತಿಳಿಸಿದಂತೆ, ಸ್ಥಳಕ್ಕೆ ಬಂದು ತನ್ನ ಪಾಲಿನ ಮಾಂಸವನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿದರು. 1 ನೇ ಆರೋಪಿ ಆತನ ಪಾಲಿನ ಮಾಂಸವನ್ನು ಬೇಡವೆಂದು ತಿಳಿಸಿದ್ದರಿಂದ ತಾನು 2 ನೇ ಆರೋಪಿಗೆ ಕರೆ ಮಾಡಿ ರೂ.1,500/- ಕ್ಕೆ ಕಡವೆ ಮಾಂಸವನ್ನು ಕೊಡಿಸುವುದಾಗಿ ಹೇಳಿ , 1 ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿ ಬಳಿ ಬರಲು ತಿಳಿಸಿ, ತಾನು ಹಾಗೂ 1 ನೇ ಆರೋಪಿ ಮಾಂಸವನ್ನು

ತೆಗೆದುಕೊಂಡು ಕಾಲುದಾರಿ ಕಡೆಗೆ ಹೊರೆಟೆವು ಹಾಗೂ ಸ್ವಲ್ಪ ಸಮಯದಲ್ಲಿ 2 ನೇ ಆರೋಪಿ ಅಲ್ಲಿಗೆ ಬಂದು 1 ನೇ ಆರೋಪಿಗೆ ರೂ .1,500/- ನೀಡಿ ಮಾಂಸವನ್ನು ತೆಗೆದುಕೊಂಡನು ಹಾಗೂ 1 ನೇ ಆರೋಪಿ ಹಣ ಪಡೆದು ಆತನ ಮನೆಗೆ ಹೊರಟನು ಎಂದು ತಿಳಿಸಿದರು. ತಾನು ಮತ್ತು 2 ನೇ ಆರೋಪಿ ಮಾಂಸವನ್ನು ತೆಗೆದುಕೊಂಡು ಕಾಲುದಾರಿಯ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ಬರುತ್ತಿರುವಾಗ ನಾವು ಬಂದು ಹಿಡಿದೆವು ಎಂದು ತಿಳಿಸಿದರು.

6. ನಾವು ಆ ಇಬ್ಬರು ಆರೋಪಿಗಳನ್ನು ದಸ್ತಗಿರಿ ಮಾಡಿ ಅವರು ತಂದಿದ್ದ ಪ್ಲಾಸ್ಟಿಕ್ ಚೀಲದಲ್ಲಿ ಇದ್ದ ಸುಮಾರು 7 ಕೆ.ಜಿ ಯಷ್ಟು ಮಾಂಸ, ಮೋಟಾರ ಬೈಕ್ ಕೆ ಎ 30-ಆರ್ 3537 ಹಾಗೂ ಅವರ ಬಳಿ ಇದ್ದ ಎರಡು ಮೊಬೈಲ್‌ಗಳನ್ನು ಜಪ್ತು ಪಡಿಸಿಕೊಂಡೆವು. ಮಧ್ಯಾಹ್ನ 2-00 ರಿಂದ 3-00 ರ ತನಕ ಸ್ಥಳದಲ್ಲಿ ಪಂಚನಾಮೆ ಕ್ರಮಜರುಗಿಸಿರುತ್ತೇವೆ. ಪಂಚನಾಮೆಯನ್ನು ನಾನೆ ಬರೆದಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು. 4 ಪೋಟೊಗಳನ್ನು ಹಾಗೂ 1 ಸಿ.ಡಿ. ಯನ್ನು ನೋಡುತ್ತಿದ್ದು, ಅವುಗಳನ್ನು ಸಾಬಿತುಪಡಿಸುವ ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿ.ಪಿ.2 ರಿಂದ ನಿ.ಪಿ.6 ಎಂದು ಗುರುತಿಸಲಾಯಿತು. ವಿವೊ ಕಂಪನಿಯ ಹಾಗೂ ಸ್ಯಾಮಸಂಗ್ ಕಂಪನಿಯ ಟಚ್ ಸ್ಕ್ರಿನ್ ಮೊಬೈಲ್‌ಗಳನ್ನು ಕ್ರಮವಾಗಿ ಎಂ.ಒ.1 ಮತ್ತು ಎಂ.ಒ.2 ಎಂದು ಗುರುತಿಸಲಾಯಿತು. 2 ಮತ್ತು 3 ನೇ

ಆರೋಪಿಯನ್ನು ನ್ಯಾಯಾಲಯದ ಮುಂದೆ ಈಗ ನೋಡಿ ಗುರುತಿಸುತ್ತಿದ್ದೇನೆ. ಸದರಿ ಆರೋಪಿಗಳನ್ನು ವಲಯ ಕಚೇರಿಗೆ ತಂದು ಭದ್ರತೆಗಾಗಿ ಕಚೇರಿಯಲ್ಲಿ ಇಟ್ಟೆವು.

7. ಅದೇ ದಿನ 1 ನೇ ಆರೋಪಿ ವಿಚಾರಣೆಗಾಗಿ ನಾನು ಹಾಗೂ ಚಾ.ಸಾ.2, ಚಾ.ಸಾ.3 ಹಾಗೂ ಚಾ.ಸಾ.5 ರಿಂದ ಚಾ.ಸಾ.7 ರವರ ಜೊತೆ ಮೇಲೆ ಹೇಳಿದಂತ ಕಾಲುದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದೆವು. ಆ ರೀತಿ ಹೋಗುತ್ತಿದ್ದಾಗ ಒಂದು ಹಳ್ಳದ ಪಕ್ಕದ ಕಲ್ಲುಬಂಡೆಯ ಮೇಲೆ ಒಬ್ಬ ವ್ಯಕ್ತಿ ಮಲಗಿಕೊಂಡಿರುವುದು ಕಂಡುಬಂತು. ನಂತರ ಪಂಚರು ಆ ಮಲಗಿರುವ ವ್ಯಕ್ತಿಯನ್ನು ಗಮನಿಸಿ 1 ನೇ ಆರೋಪಿ ಎಂದು ತಿಳಿಸಿದರು. ಆತನ ಹತ್ತಿರ ಹೋಗಿ ಕಡವೆಯನ್ನು ಕೊಂದ ಬಗ್ಗೆ ವಿಚಾರಿಸಲಾಗಿ, ತಾನೆ ಕಡವೆಯನ್ನು ಕೊಂದಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಕಡವೆಯನ್ನು ಕೊಂದ ಸ್ಥಳವನ್ನು ತೋರಿಸಲು ಕೇಳಲಾಗಿ, ಅವರು ನಮ್ಮನ್ನು ಸುಮಾರು 100 ಮೀಟರ್ ದೂರದಲ್ಲಿದ್ದ ಒಂದು ಹಳ್ಳದ ಹತ್ತಿರ ಕರೆದುಕೊಂಡು ಹೋಗಿ, ಅದೆ ಸ್ಥಳದಲ್ಲಿ ಕಡವೆ ಸತ್ತು ಬಿದ್ದಿರುವುದು ಹಾಗೂ ಅದೇ ಸ್ಥಳದಲ್ಲಿ ತಾನು ಹಾಗೂ 3 ಮತ್ತು 5 ನೇ ಆರೋಪಿ ಸೇರಿ ಸದರಿ ಕಡವೆಯನ್ನು ಕತ್ತರಿಸಿರುವುದಾಗಿ ತಿಳಿಸಿದರು. ಅಲ್ಲೆ ಪಕ್ಕದಲ್ಲಿ ಬಿದ್ದಿದ್ದ ಕತ್ತರಿಸಿದ ಕಡವೆಯ ತಲೆಯನ್ನು ತೋರಿಸಿದರು. ಅಲ್ಲೆ ಪಕ್ಕದ ಹಳ್ಳದ ನೀರಿನಲ್ಲಿ ಮುಳುಗಿಸಿಟ್ಟಿದ್ದ ಕಡವೆಯ ಕಾಲುಗಳು, ಚರ್ಮ ಹಾಗೂ ಅದರ ಹೊಟ್ಟೆಯಲ್ಲಿ ಇದ್ದ ಮರಿಯನ್ನು ಒಂದೊಂದಾಗಿ ತೆಗೆದು ತೋರಿಸಿದರು. ಅದೇ ಸ್ಥಳದಿಂದ 4 ನೇ

ಆರೋಪಿ ಕಡವೆಯ ಮಾಂಸವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದರು. ಬಂದೂಕಿನ ಬಗ್ಗೆ ಕೇಳಲಾಗಿ, ಅಲ್ಲೆ ಪಕ್ಕದಲ್ಲಿ ಇದ್ದ ಬಿ.ಡಿ.ಗೌಡರ ತೆಂಗಿನ ತೋಟಕ್ಕೆ ಕರೆದುಕೊಂಡು ಹೋಗಿ , ತೆಂಗಿನ ಮರದ ಬುಡದಲ್ಲಿ ಬಚ್ಚಿಟ್ಟಿದ್ದ ಬಂದೂಕನ್ನು ತೋರಿಸಿದರು.

8. ನಂತರ ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಮತ್ತು ಪಶು ವೈದ್ಯ ಆಸ್ಪತ್ರೆ,ಅಂಕೋಲಾ ರವರನ್ನು ಸ್ಥಳಕ್ಕೆ ಕರೆಯಿಸಿ ಕಡವೆಗೆ ಗುಂಡು ತಗಲಿದ ಚರ್ಮದ ಭಾಗ ಹಾಗೂ ಕಡವೆಯ ಚರ್ಮ ಹಾಗೂ ಮಾಂಸದ ಸ್ಯಾಂಪಲ್‌ಗಳನ್ನು ತೆಗೆಯಲಾಯಿತು. 1 ನೇ ಆರೋಪಿಯನ್ನು ದಸ್ತಗಿರಿ ಮಾಡಲಾಯಿತು. ಸ್ಥಳದಲ್ಲಿ ಇದ್ದ ಕಡವೆಯ ತಲೆ, ಚರ್ಮ, ನಾಲ್ಕು ಕಾಲುಗಳು, ಬಂದೂಕು ಹಾಗೂ ಕತ್ತಿಯನ್ನು ಜಪ್ತು ಪಡಿಸಲಾಯಿತು. ಸಂಜೆ 4-30 ಯಿಂದ 6-00 ರ ತನಕ ಪಂಚನಾಮ ಕ್ರಮ ಜರುಗಿಸಿ, ಪೋಟೊಗಳನ್ನು ಹಾಗೂ ವೀಡಿಯೊವನ್ನು ತೆಗೆಯಲಾಯಿತು. ಪಂಚನಾಮೆಯನ್ನು ನಾನೆ ಬರೆದಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7 ಎ ಎಂದು ಗುರುತಿಸಲಾಯಿತು. 6 ಪೋಟೊಗಳನ್ನು ಹಾಗೂ 1 ಸಿ.ಡಿ. ಯನ್ನು ನೋಡುತ್ತಿದ್ದು, ಅವುಗಳನ್ನು ಸಾಬಿತುಪಡಿಸುವ ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿ.ಪಿ.8 ರಿಂದ ನಿ.ಪಿ.14 ಎಂದು ಗುರುತಿಸಲಾಯಿತು. ಬಂದೂಕು ಮತ್ತು ಕತ್ತಿಯನ್ನು ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ಎಂ ಒ 3 ಮತ್ತು ಎಂ ಒ 4 ಎಂದು ಗುರುತಿಸಲಾಯಿತು. ಮಾದರಿ ಚರ್ಮದ ಭಾಗವನ್ನು ನೋಡುತ್ತಿದ್ದು, ಅದನ್ನು ಎಂ ಒ 5 ಎಂದು ಹಾಗೂ ಇನ್ನೊಂದು ಮಾದರಿ ಚರ್ಮದ

ಭಾಗವನ್ನು ನೋಡುತ್ತಿದ್ದು, ಅದನ್ನು ಎಂ ಒ 6 ಎಂದು ಗುರುತಿಸಲಾಯಿತು. ಎಂ ಒ 5 ಚರ್ಮದ ಭಾಗದಲ್ಲಿ ಗುಂಡು ತಾಗಿರುವ ತೂತು ಕಾಣುತ್ತದೆ. 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

9. 1 ನೇ ಆರೋಪಿಯ ಜೊತೆ ಜಪ್ತು ಪಡಿಸಿದ ಸ್ವತ್ತುಗಳ ಜೊತೆ ತೆಗೆದುಕೊಂಡು ಬಂದು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.15 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.15 ಎ ಎಂದು ಗುರುತಿಸಲಾಯಿತು. ಆರೋಪಿಗಳ ಮತ್ತು ಜಪ್ತು ಪಡಿಸಿದ ಸ್ವತ್ತುಗಳ ಪೋಟೊವನ್ನು ತೆಗೆಯಲಾಯಿತು. ಆ ಬಗ್ಗೆ ಎರಡು ಪೋಟೊಗಳನ್ನು ಹಾಜರು ಪಡಿಸಿದ್ದು, ಅದರ ಬಾಪ್ತು ಸಿ.ಡಿ. ನಿ.ಪಿ.14 ಆಗಿದ್ದು, ಸದರಿ ಪೋಟೊಗಳನ್ನು ಸಾಬಿತು ಪಡಿಸುವ ಜವಾಬ್ದಾರಿಯೊಂದಿಗೆ ನಿ.ಪಿ.16 ಮತ್ತು ನಿ.ಪಿ.17 ಎಂದು ಗುರುತಿಸಲಾಯಿತು. ನಂತರ ನ್ಯಾಯಾಲಯದಲ್ಲಿ ದೂರನ್ನು ಸಲ್ಲಿಸಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಸೂಕ್ತ ಬಂದೂಬಸ್ತಿನಲ್ಲಿ ಮುಂದಿನ ಕ್ರಮಕ್ಕಾಗಿ ಹಾಜರು ಪಡಿಸಲಾಯಿತು.

10. ದಿನಾಂಕ 15-08-2020 ರಂದು 4 ಮತ್ತು 5 ನೇ ಆರೋಪಿಗಳ ವಿಚಾರಣೆಗಾಗಿ ಸರ್ಚ್ ವಾರೆಂಟಗಳನ್ನು ಮೇಲಾಧಿಕಾರಿಯಿಂದ ಪಡೆದುಕೊಂಡಿರುತ್ತೇನೆ. ಸದರಿ ಸರ್ಚ್ ವಾರೆಂಟಗಳನ್ನು ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.18 ಮತ್ತು ನಿ.ಪಿ.19 ಎಂದು ಗುರುತಿಸಲಾಯಿತು. ಅವರಿಬ್ಬರ ಮನೆಗೆ ಹೋಗಿ ತಲಾಷು ಮಾಡಲಾಗಿ ಅವರಿಬ್ಬರು ಮನೆಯಲ್ಲಿ ಪತ್ತೆಯಾಗಿರುವುದಿಲ್ಲ . ದಿನಾಂಕ 17-08-2020 ರಂದು ಈ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡಿದ್ದ

ಕಡವೆಯ ದೇಹದ ಭಾಗಗಳು ಕೊಳೆತು ಹಾಳಾಗುವುದರಿಂದ ಅವುಗಳ ಸೂಕ್ತ ವಿಲೆವಾರಿಗಾಗಿ ಈ ನ್ಯಾಯಾಲಯದ ಅನುಮತಿ ಪಡೆದು ಅವುಗಳನ್ನು ಅಂಕೋಲಾ ವಲಯ ಕಚೇರಿಯಲ್ಲಿ ಕಟ್ಟಿಗೆಯಿಂದ ಸುಟ್ಟು ಹಾಕಲಾಯಿತು. ಆ ಸಮಯದಲ್ಲಿ ಛಾಯ ಚಿತ್ರ, ವೀಡಿಯೊ ಹಾಗೂ ಪಂಚನಾಮೆಯನ್ನು ಮಾಡಲಾಯಿತು. ಆ ಪಂಚನಾಮೆಯನ್ನು ನಾನೆ ಬರೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ.20 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.20 ಎ ಎಂದು ಗುರುತಿಸಲಾಯಿತು. ಆ ಬಗ್ಗೆ 5 ಪೋಟೊಗಳನ್ನು ಹಾಜರು ಪಡಿಸಿದ್ದು, ಅದರ ಬಾಪ್ತು ಸಿ.ಡಿ. ನಿ.ಪಿ.14 ಆಗಿದ್ದು, ಅವುಗಳನ್ನು ನೋಡುತ್ತಿದ್ದು, ಸದರಿ ಪೋಟೊಗಳನ್ನು ಸಾಬಿತು ಪಡಿಸುವ ಜವಾಬ್ದಾರಿಯೊಂದಿಗೆ ನಿ.ಪಿ.21 ರಿಂದ ನಿ.ಪಿ.25 ಎಂದು ಗುರುತಿಸಲಾಯಿತು. ದಿನಾಂಕ 29-09-2020 ರಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ಈ ಪ್ರಕರಣದಲ್ಲಿ ಜಪ್ತ ಪಡಿಸಿದ ಬಂದೂಕು ಮತ್ತು ಮದ್ದು ಗುಂಡು ತುಂಬಿಕೊಂಡು ಲೊಡೆಡ್ ಆಗಿದ್ದರಿಂದ ಅದನ್ನು ಅನ್ ಲೋಡ್ ಮಾಡಲು ಜಿಲ್ಲಾ ಶಸ್ತ್ರಾಸ್ತ್ರ ಮಿಸಲು ಪಡೆಯ ಸಿಬ್ಬಂದಿಯಾದ ಚಾ.ಸಾ.9 ರವರು ಸ್ಥಳಕ್ಕೆ ಬಂದಿದ್ದರು. ಅವರ ಮೂಲಕ ಆ ಬಂದೂಕನ್ನು ಅನ್‌ಲೋಡ್ ಮಾಡಿ ಅದರಲ್ಲಿದ್ದ 4 ಸೀಸದ ಗುಂಡುಗಳು ಹಾಗೂ 5 ಗ್ರಾಂ ನಷ್ಟು ಗನ್ ಪೌಡರ್ ನ್ನು ಹೊರತೆಗೆದು ವಲಯ ಅರಣ್ಯಾಧಿಕಾರಿ ವಶಕ್ಕೆ ನೀಡಲಾಯಿತು. ಈ ಬಗ್ಗೆ ಛಾಯಾ ಚಿತ್ರ ತೆಗೆದು ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಲಾಯಿತು.

ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.26 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.26 ಎ ಎಂದು ಗುರುತಿಸಲಾಯಿತು. ಆ ಬಗ್ಗೆ 1 ಪೋಟೋವನ್ನು ಹಾಜರು ಪಡಿಸಿದ್ದು, ಅದರ ಬಾಪ್ತು ಸಿ.ಡಿ. ನಿ.ಪಿ.14 ಆಗಿದ್ದು, ಅದನ್ನು ನೋಡುತ್ತಿದ್ದು, ಸದರಿ ಪೋಟೋವನ್ನು ಸಾಬಿತು ಪಡಿಸುವ ಜವಾಬ್ದಾರಿಯೊಂದಿಗೆ ನಿ.ಪಿ.27 ಎಂದು ಗುರುತಿಸಲಾಯಿತು.

11. ದಿನಾಂಕ 07-11-2020 ರಂದು ಸಹಾಯಕ ಅರಣ್ಯ ಸಂರಕ್ಷಾಣಾಧಿಕಾರಿ ಕಚೇರಿ, ಅಂಕೋಲಾದಲ್ಲಿ ಜಪ್ತು ಪಡಿಸಿಕೊಂಡ ಮಾದರಿ ಗುಂಡು ತಗುಲಿದ ಚರ್ಮ, ಇನ್ನೊಂದು ಮಾದರಿ ಚರ್ಮ ಹಾಗೂ ಬಂದೂಕು ಹಾಗೂ 4 ಸೀಸದ ಗುಂಡುಗಳು ಹಾಗೂ ಗನ್ ಪೌಡರ್ ಮತ್ತು ಆರೋಪಿಗಳ ಉಗುರುಗಳ ಮಾದರಿಗಳನ್ನು ಸರಕಾರಿ ವಿಧಿವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರಿಗೆ ಕಳುಹಿಸಲು ಅವುಗಳನ್ನು ಆರಟಿಕಲ್ 1 ರಿಂದ 7 ಎಂದು ನಮೂದಿಸಿ, ಬಿಳಿ ಬಟ್ಟೆಯಿಂದ ಸುತ್ತಿ, ಅರಗು ಹಚ್ಚಿ, ಆರ್ ಎಫ್ ಒ, ಅಂಕೋಲಾ ಎಂದು ಮೊಹರು ಮಾಡಿ ಪ್ಯಾಕ್ ಮಾಡಿ ಪಂಚರು ಹಾಗೂ ನಾವೆಲ್ಲಾ ಸಹಿ ಮಾಡಿರುತ್ತೇವೆ. ಆ ಬಗ್ಗೆ ಪಂಚನಾಮೆಯನ್ನು ಕೂಡ ಜರುಗಿಸಲಾಯಿತು. ಆ ಬಗ್ಗೆ ಕಡತದಲ್ಲಿ ಮೂಲ ಪಂಚನಾಮೆ ಇರುವುದಿಲ್ಲ ಹಾಗೂ ಮೂಲ ಪಂಚನಾಮೆಯು ಏನಾಯಿತು ಎಂದು ಕೂಡ ವಿವರಣೆ ಇಲ್ಲದೆ ಇರುವುದರಿಂದ ಕಡತದಲ್ಲಿ ಇರುವ

C.C.No. 17/2022

C.W.1

P.W.1

ಜರಾಕ್ಸ ಪ್ರತಿಯನ್ನು ಗುರುತಿಸಬೇಕೆಂಬ ಕೋರಿಕೆಯನ್ನು ತಿರಸ್ಕರಿಸಲಾಯಿತು. ಎಂ ಒ 3 ರ ಪ್ಯಾಕ್‌ನ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಹಿಯನ್ನು ನೋಡುತ್ತಿದ್ದು, ಅದನ್ನು ಎಂ ಒ 3 ಎ ಎಂದು ಗುರುತಿಸಲಾಯಿತು. ಎಂ ಒ 5 ರ ಪ್ಯಾಕ್‌ನ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಹಿಯನ್ನು ನೋಡುತ್ತಿದ್ದು, ಅದನ್ನು ಎಂ ಒ 5 ಎ ಎಂದು ಗುರುತಿಸಲಾಯಿತು. ಎಂ ಒ 6 ರ ಪ್ಯಾಕ್‌ನ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಹಿಯನ್ನು ನೋಡುತ್ತಿದ್ದು, ಅದನ್ನು ಎಂ ಒ 6 ಎ ಎಂದು ಗುರುತಿಸಲಾಯಿತು. ಆರೋಪಿ 1 ರಿಂದ 3 ರವರ ಉಗುರಿನ ಸ್ಯಾಂಪಲ್‌ಗಳ ಪ್ಯಾಕ್‌ಗಳನ್ನು ನೋಡುತ್ತಿದ್ದು, ಅವುಗಳನ್ನು ತೆರೆದು ಸದರಿ ಉಗುರುಗಳನ್ನು ಕ್ರಮವಾಗಿ ಎಂ ಒ 7 ರಿಂದ ಎಂ ಒ 9 ಎಂದು, ಪ್ಯಾಕ್‌ಗಳ ಮೇಲೆ ಅಂಟಿಸಿದ ಚೀಟಿಯಲ್ಲಿರುವ ಸಹಿಗಳನ್ನು ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ಎಂ ಒ 7 ಎ ರಿಂದ ಎಂ ಒ 9 ಎ ಎಂದು ಗುರುತಿಸಲಾಯಿತು. ಸದರಿ ಮಾದರಿ ಆರಟಿಕಲ್ 1 ರಿಂದ 7 ನ್ನು ಎಫ್ ಎಸ್ ಎಲ್, ಬೆಂಗಳೂರಿಗೆ ನಾನೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ. ಆರಟಿಕಲ್ 4 ಅಂದರೆ ಸೀಸದ ಗುಂಡುಗಳು ಹಾಗೂ ಗನ್ ಪೌಡರ ನ್ನು ಹೊರತು ಪಡಿಸಿ ಉಳಿದ ಆರಟಿಕಲ್‌ನ್ನು ಪರೀಕ್ಷೆಯ ನಂತರ ತಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲಾ ರವರಿಗೆ ಒಪ್ಪಿಸಿರುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿರುತ್ತೇನೆ.

C.C.No. 17/2022

C.W.1

P.W.1

( ವಕೀಲರ ವಿನಂತಿಯ ಮೇರೆಗೆ ಪಾಟಿ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ.